**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಹುಣಸೂರು**

**C.C. 4/2022**

| | | |
|---|---|---|
| ಸಾಕ್ಷಿಯ ಹೆಸರು | ಃ ಚಂದ್ರೇಗೌಡ | ಡಿ. ಡಬ್ಲ್ಯೂ 1 |
| ತಂದೆ/ಗಂಡನ ಹೆಸರು | ಃ ಲೇಟ್ ಅಣ್ಣೇಗೌಡ | |
| ವಯಸ್ಸು | ಃ 42 ವರ್ಷ | |
| ವೃತ್ತಿ | ಃ ವ್ಯವಸಾಯ | |
| ವಾಸಸ್ಥಳ | ಃ ರಾಜೇಗೌಡನಹುಂಡಿ ಗ್ರಾಮ | |

**ಸಾಕ್ಷಿಗೆ ದಿನಾಂಕ 03.03.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿದ**

ನಾನು ತಿಮ್ಮೇಗೌಡರವರಿಂದ 50,000/- ಸಾವಿರ ಪಡೆದುಕೊಂಡಿದ್ದೇನು. ನಾನು ತಂಬಾಕು ಮಾರಾಟ ಮಾಡಿ ಬಂ ಹಣದಿಂದ 50,000/- ತಿಮ್ಮೇಗೌಡರವರಿಗೆ ಮರುಪಾವತಿ ಮಾಡಿರುತ್ತೇನೆ. ತಂಬಾಕು ತಿಮ್ಮೇಗೌಡರವರ ಹೆಸರಿನಲ್ಲಿ ಬಿಡುಗಡೆ ಮಾಡಿರುತ್ತೇನೆ. ಸದರಿ ಸಾಲದ ಭದ್ರತೆಗಾಗಿ ಸಹಿ ಮಾಡಿದ ಖಾಲಿ ಚೆಕ್ಕನ್ನು ತಿಮ್ಮೇಗೌಡರವರಿಗೆ ಕೊಟ್ಟಿದ್ದೇನು, 50,000/- ಮರುಪಾವತಿ ಮಾಡಿದ ನಂತರ ಭದ್ರತೆಗಾಗಿ ಕೊಟ್ಟ ಚೆಕ್ಕನ್ನು ವಾಪಸ್ಸು ಕೊಡುವಂತೆ ಕೇಳಿದಾಗ, ಇಂದು ನಾಳೆ ಕೊಡುತ್ತೇನೆ ಎಂದು ಕಾಲ ಹರಣ ಮಾಡಿರುತ್ತಾರೆ. 2020 ರಲ್ಲಿ ನನಗೆ ಕಾಲಿನ ಶಸ್ತ್ರ ಚಿಕಿತ್ಸೆ ಆಗಿದ್ದು ನನಗೆ ನ್ಯಾಯಾಲಯದಿಂದ ನೋಟೀಸ್ ಬಂದಾಗ ನಾನು ತಿಮ್ಮೇಗೌಡರವರಿಗೆ ಕರೆ ಮಾಡಿ ಚೆಕ್ಕು ವಾಪಸ್ಸು ಕೊಡುವಂತೆ ಕೇಳಿದಾಗ ತಪ್ಪಾಗಿ ನೋಟೀಸ್ ಬಂದಿರುತ್ತದೆ ನನಗೆ ಚೆಕ್ಕನ್ನು ವಾಪಸ್ಸು ಕೊಡುತ್ತೇನೆ ಎಂದು ಹೇಳಿರುತ್ತಾರೆ.

ನಾನು ಭದ್ರತೆಗಾಗಿ ಕೊಟ್ಟ ಖಾಲಿ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ನನ್ನ ವಿರುದ್ಧ ಫಿರ್ಯಾದುದಾರರ ಮೂಲಕ ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ.

ನಾನು ಪಿರ್ಯಾದುದಾರರಿಂದ 2 ಲಕ್ಷ ಸಾಲ ಪಡೆದುಕೊಂಡಿಲ್ಲ, 2 ಲಕ್ಷ ಸಾಲ ಮರುಪಾವತಿ ಮಾಡುವುದಾಗಿ ಒಪ್ಪಿ ನಾನು ಯಾವುದೇ ಚೆಕ್ಕು ನೀಡಿಲ್ಲ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೇಳಿದ್ದು ಕಾಲವಕಾಶ ನೀಡಲಾಯಿತು.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**
**ಹುಣಸೂರು.**